# ‘ಜಗತ್ತು ತಿಳಿದುಕೊಂಡದ್ದಕ್ಕಿಂತ ಹೆಚ್ಚು ಸುಖ ನಮ್ಮದು...

84ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಚಂದ್ರಶೇಖರ ಕಂಬಾರರು ಕನ್ನಡ ಸಾಹಿತ್ಯ ಲೋಕದ ತಾರಾವರ್ಚಸ್ಸಿನ ಕವಿ. ಆದರೆ, ಪ್ರತಿಯೊಬ್ಬ ಪ್ರಸಿದ್ಧರಿಗೂ ಒಂದು ಖಾಸಗಿ ಮುಖ ಇರುತ್ತದಷ್ಟೆ. ಅದು ಅವರ ಸಂಗಾತಿಗಷ್ಟೇ ಪರಿಚಿತವಾದ ಮುಖ. ಕಂಬಾರರ ಪತ್ನಿ ಸತ್ಯಭಾಮಾ ಅವರ ಈ ಸಂದರ್ಶನ, ಕವಿಯ ಜೊತೆಗೆ ಕವಿಪತ್ನಿಯ ವ್ಯಕ್ತಿತ್ವದ ಅನನ್ಯತೆಯನ್ನೂ ಕಾಣಿಸುವಂತಿದೆ. ‘ಸುಧಾ’ಕ್ಕಾಗಿ ಈ ವಿಶೇಷ ಸಂದರ್ಶನ ನಡೆಸಿಕೊಟ್ಟಿದ್ದಾರೆ ಕನ್ನಡದ ಖ್ಯಾತ ವಿಮರ್ಶಕಿ **ಎಂ.ಎಸ್. ಆಶಾದೇವಿ.**



‘ಸುಧಾ’ ವಿಶೇಷ ಸಂದರ್ಶನ

ಚಿತ್ರಗಳು: ಹರ್ಷ ಶಿವಪ್ರಕಾಶ್

ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಹೆಣ್ಣಿನ ಪಾತ್ರ ಇರುತ್ತದೆ ಎನ್ನುವುದೊಂದು ಕ್ಲೀಷೆ ಮಾತ್ರವಲ್ಲ, ಹೆಣ್ಣನ್ನು ಕುರಿತ ಮೆಚ್ಚುಗೆ, ಕೃತಜ್ಞತೆ ಮಾತ್ರವಲ್ಲ, ಅದು ಅವಳನ್ನು ನಿಯಂತ್ರಿಸುವ ಸುಂದರವಾದ ಅಸ್ತ್ರವೂ ಹೌದು. ಎಲ್ಲೋ ಕೆಲವು ದಾಂಪತ್ಯಗಳು ಮಾತ್ರ ಇವುಗಳನ್ನು ಮೀರಿಕೊಂಡು ‘ಕೊಡುವುದೇನು ಕೊಂಬುದೇನು, ಒಲವು, ಸ್ನೇಹ , ಪ್ರೀತಿ’ ಎನ್ನುವ ನೆಲೆಯನ್ನು ಸಾಧಿಸುತ್ತವೆ. ಕನ್ನಡದ ಮಹತ್ವದ ಲೇಖಕ, ನಾಟಕಕಾರ, ಕಾದಂಬರಿಕಾರ ಚಂದ್ರಶೇಖರ ಕಂಬಾರ ಮತ್ತು ಸತ್ಯಭಾಮಾ ಅವರ ದಾಂಪತ್ಯ ಇಂಥ ಅಪರೂಪದ ದಾಂಪತ್ಯ. ಪ್ರಖ್ಯಾತ ಲೇಖಕರ ಪತ್ನಿಯಾಗಿ ಅವರ ನಿಡುಗಾಲದ ಪಯಣದ ಏರಿಳಿತಗಳನ್ನು ಈ ಮಾತುಕತೆಯಲ್ಲಿ ಕಾಣಿಸಿದ್ದಾರೆ. ತನ್ನ ತ್ಯಾಗದಿಂದ, ಸಹಕಾರದಿಂದ ಕಂಬಾರರು ಇಷ್ಟೆಲ್ಲವನ್ನು ಸಾಧಿಸಲು ಸಾಧ್ಯವಾಯಿತು ಎನ್ನುವ ವಾಡಿಕೆಯ ನಿಲುವು ಇಲ್ಲಿಲ್ಲ. ಬದಲಿಗೆ ಇದು ಇಬ್ಬರೂ ಕೂಡಿ ನಡೆದ ಪಯಣ ಎನ್ನುವ ದೃಷ್ಟಿಕೋನ